ಶ್ರೀ ಆಂಜನಾಮೂರ್ತಿ:– ನನಗೆ ಉತ್ತರ ಕಳುಹಿಸಿದ್ದಾರೆ. ಒಂದೆರಡು ಕ್ಲಾರಿಫಿಕೇಷನ್ ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ನನಗೆ ಸ್ವಲ್ಪ ಸಮಯ ಕೊಟ್ಟರೆ ನಾನು ಇದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು:– ಆ ಪ್ರಶ್ನೆಯನ್ನು ನೀರಾವರಿ ಇಲಾಖೆಗೆ ವರ್ಗಾಯಿಸಿರುವುದರಿಂದ ಅದನ್ನು ತಡೆಹಿಡಿದಿರುತ್ತೇನೆ.

## ಹೇಮಾವತಿ ನಾಲಾ ವಲಯ ತುಮಕೂರು ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ಬಗ್ಗೆ.

**168 (167):** ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):—

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಳೆದ ಐದು ವರ್ಷಗಳಿಂದ ಹೇಮಾವತಿ ನಾಲಾ ವಲಯ, ತುಮಕೂರು ವ್ಯಾಪ್ತಿಯಲ್ಲಿ ಎಷ್ಟು ಮಂದಿ ಸಹಾಯಕ ಇಂಜಿನಿಯರ್ ಮತ್ತು ಎಷ್ಟು ಮಂದಿ ಕಿರಿಯ ಇಂಜಿನಿಯರ್‌ಗಳು ಸೇವೆ ಸಲ್ಲಿಸುತ್ತಿದ್ದಾರೆ;

ಆ) ಐದು, ಆರು ವರ್ಷಗಳಿಂದ ಅಲ್ಲಿಯೇ ಸೇವೆ ಮಾಡುತ್ತಿರುವ ಕಾರಣ ಏನು;

ಇ) ಪರಸ್ಪರ ವರ್ಗಾವಣೆ ಆಧಾರದ ಮೇಲೆ ಎಷ್ಟು ವರ್ಷದಿಂದ ಎಷ್ಟು ಮಂದಿ ಕೆಲಸ ನಿರ್ವಹಿಸುತ್ತಿದ್ದಾರೆ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) 1. ಸಹಾಯಕ ಇಂಜಿನಿಯರುಗಳು 48 ಮಂದಿ
2. ಕಿರಿಯ ಇಂಜಿನಿಯರುಗಳು 29 ಮಂದಿ.

ಆ) ಮೇಲಿನ ನೌಕರರು ವಲಯದಿಂದ ಹೊರಗೆ ವರ್ಗವಾಗದಿದ್ದ ಕಾರಣ ಈ ವಲಯದಲ್ಲಿಯೇ ಮುಂದುವರಿಯುತ್ತಿದ್ದಾರೆ.

ಇ) 16 ಸಹಾಯಕ ಇಂಜಿನಿಯರುಗಳ, 8 ಕಿರಿಯ ಇಂಜಿನಿಯರುಗಳು ಒಂದು ಮತ್ತು ಎರಡು ವರ್ಷಗಳಿಗೂ ಮೇಲ್ಪಟ್ಟು ಕೆಲಸ ನಿರ್ವಹಿಸುತ್ತಿದ್ದಾರೆ.

ಶ್ರೀ ಕೆ. ಲಕ್ಕಣ್ಣ:– ಹೇಮಾವತಿ ಯೋಜನೆ, ತುಮಕೂರು ಭಾಗದಲ್ಲಿ ಅಸಿಸ್ಟೆಂಟ್ ಇಂಜಿನಿಯರ್‌ಗಳು ಮತ್ತು ಜೂನಿಯರ್ ಇಂಜಿನಿಯರ್‌ಗಳು ಸುಮಾರು 10-12ವರ್ಷಗಳಿಂದ ಸೇವೆ ಮಾಡುತ್ತಿದ್ದಾರೆ. ಅವರು ಪರಸ್ಪರ ವರ್ಗಾವಣೆ ಅಲ್ಲಿಯೇ ಮಾಡಿಕೊಂಡು ಇದುವರೆಗೂ ಬೇರೆ ಕಡೆ ವರ್ಗಾವಣೆಯಾಗಿಲ್ಲ. ಏತಕ್ಕೋಸ್ಕರ ವರ್ಗಾವಣೆ ಮಾಡಿಲ್ಲವೆಂದು ನೀರಾವರಿ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಈ ವಲಯದಲ್ಲಿ ಎರಡು ವೃತ್ತ ಕಛೇರಿಗಳಿವೆ, 8 ವಿಭಾಗ ಕಛೇರಿಗಳಿವೆ, 32 ಉಪವಿಭಾಗ ಕಛೇರಿಗಳಿವೆ; ಡಿಸೆಂಬರ್ 1992ರಿಂದೀಚೆಗೆ ಎರಡು ಹೇಮಾವತಿ ನಾಲಾ ವಿತರಣಾ ವಿಭಾಗ ಕಛೇರಿಗಳು ಮತ್ತು 7 ಉಪ ವಿಭಾಗ ಕಛೇರಿಗಳು ಸೃಷ್ಟಿಯಾಗಿವೆ. ಐದು ವರ್ಷಕ್ಕೆ ಮೇಲ್ಪಟ್ಟು 48 ಸಹಾಯಕ ಇಂಜಿನಿಯರ್‌ಗಳು 29 ಕಿರಿಯ ಇಂಜಿನಿಯರ್‌ಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಹೊರಗೆ ವರ್ಗಾವಣೆ ಹೊಂದಿರದ ಪ್ರಯುಕ್ತ ಈ ವಲಯದಲ್ಲಿಯೇ ಒಂದು ಸ್ಥಳದಿಂದ ಇನ್ನೊಂದು

ಸ್ಥಳಕ್ಕೆ ಸರ್ಕಾರಿ ನೌಕರರ ಕೋರಿಕೆಯಂತೆ 16 ಮಂದಿ ಸಹಾಯಕ ಇಂಜಿನಿಯರ್‌ಗಳು ಮತ್ತು 8 ಮಂದಿ ಕಿರಿಯ ಇಂಜಿನಿಯರ್‌ಗಳು ಪರಸ್ಪರ ವರ್ಗಾವಣೆ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ.

ಶ್ರೀ ಕೆ.ಲಕ್ಕಣ್ಣ:– ಆ ವಲಯದಿಂದ ಬೇರೆ ಕಡೆ ವರ್ಗಾವಣೆ ಏತಕ್ಕೆ ಮಾಡಬಾರದೆಂದು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಸಾರ್ವಜನಿಕ ಹಾಗೂ ಸರ್ಕಾರದ ಹಿತದೃಷ್ಟಿಯಿಂದ ಒಂದು ವಲಯದಿಂದ ಇನ್ನೊಂದು ವಲಯಕ್ಕೆ ವರ್ಗಾವಣೆಯಾಗುವುದರಿಂದ ಕೆಲಸ ಇನ್ನೂ ಚೆನ್ನಾಗಿ ನಡೆಯುತ್ತೆಂಬುದು ಸರ್ಕಾರದ ಗಮನಕ್ಕೆ ಬಂದರೆ ಅದನ್ನು ಮಾಡುವುದಕ್ಕೆ ತಯಾರಾಗಿದ್ದೇವೆ.

ಮಾನ್ಯ ಅಧ್ಯಕ್ಷರೇ, ಪ್ರಶ್ನೆ 1279ಕ್ಕೆ ಒಂದು ವಾರದ ಕಾಲವಕಾಶಬೇಕೆಂದು ತಮಗೆ ಆಗಲೇ ಕೇಳಿಕೊಂಡಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಯಾವುದೇ ವಿವರಗಳನ್ನು ಸಂಗ್ರಹ ಮಾಡಬೇಕಾಗಿಲ್ಲ. ಎಲ್ಲಾ ಇಲಾಖೆ ಮುಖ್ಯಸ್ಥರಲ್ಲೇ ಸಿಗುತ್ತದೆ. ತುಂಗಾ ನೀಲ್ದಂಡೆ ಯೋಜನೆ ಬಗ್ಗೆ ಒದು ತಿಂಗಳೊಳಗಾಗಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯುತ್ತಿದ್ದೇನೆಂದು ಹಿಂದಿನ ಅಧಿವೇಶನದಲ್ಲಿ ಹೇಳಿದ್ದರು. ಮಂಜೂರಾತಿ ಪಡೆಯಲಾಗಿದೆಯೇ ಎಂದು ಕೇಳಿದ್ದೇನೆ. ಇದಕ್ಕೆ ಏನು ವಿವರ ಬೇಕು ? ಮತ್ತೆ 1993-94ರ ಆಯವ್ಯಯದಲ್ಲಿ 50 ಕೋಟಿ ಒದಗಿಸುತ್ತೇನೆಂದು ಹೇಳಿದರು. ಆದರೆ ಕೇವಲ 5 ಕೋಟಿಯನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ. ಸರ್ಕಾರ ಈ ತುಂಗಾ ಮೇಲ್ದಂಡೆ ನೀರಾವರಿ ವಿಚಾರವಾಗಿ ಸಂಪೂರ್ಣ ನಿರ್ಲಕ್ಷ್ಯ ತಾಳಿದೆ. ಈ ಪ್ರಶ್ನೆಗೆ ಉತ್ತರ ಕೊಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಈ ಬಗ್ಗೆ ಸರ್ಕಾರ ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡುತ್ತಿಲ್ಲ. ಇದನ್ನು ಕೇಂದ್ರಕ್ಕೆ ಕಳುಹಿಸಿ 3 ವರ್ಷ ಆಯಿತು. ಇನ್ನೂ ಕೂಡಾ.....

ಅಧ್ಯಕ್ಷರು:– ಮುಂದಿನವಾರ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೇನೆ. ಸರಿಯಾದ ಉತ್ತರ ಹೇಳುವುದಕ್ಕೆ ಅವಕಾಶ ಕೇಳಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಇದಕ್ಕೇ ಕೇಂದ್ರದಿಂದ ಮಂಜೂರಾತಿ ಪಡೆಯಲು ಆಗದಿದ್ದರೆ ಕರ್ನಾಟಕದ ಯಾವ ಯೋಜನೆಗೂ ಮಂಜೂರಾತಿ ಪಡೆಯುವುದಕ್ಕಾಗುವುದಿಲ್ಲ.

ಅಧ್ಯಕ್ಷರು:– ಮಂಜೂರಾತಿ ಆಗಿಲ್ಲ ಎಂದು ಉತ್ತರ ಹೇಳಿಲ್ಲ. ಸರಿಯಾದ ಉತ್ತರ ಹೇಳುವುದಕ್ಕೆ ಕಾಲಾವಕಾಶ ಕೇಳಿದ್ದಾರೆ. ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಇಲಾಖೆಯವರೇ ಕೊಡತಕ್ಕ ಉತ್ತರ. ಆದಕ್ಕೆ ಹಣ ಒದಗಿಸಿಲ್ಲ, ಮಂಜೂರಾತಿ ಕೊಟ್ಟಿಲ್ಲ. ಉತ್ತರ ಪಡೆಯುವುದಕ್ಕೇ ಇಷ್ಟು ಕಠಿಣವಾದರೆ ಈ ಸರ್ಕಾರಕ್ಕೆ ನೀರಾವರಿ ಮಾಡುವುದಕ್ಕೆ ಸಾಧ್ಯವೇ ಎನ್ನುವ ಸಂಶಯ ರೈತರಿಗೆ ಬರುತ್ತದೆ. ಇನ್ನು ಸಿಬ್ಬಂದಿ ನೇಮಿಸುವ ಬಗ್ಗೆ ವಿವರಣೆ ಕೇಳಿದ್ದು, ಇದಕ್ಕೆ ಸಿಬ್ಬಂದಿಯನ್ನು ಪ್ರತ್ಯೇಕವಾಗಿ ನೇಮಿಸಿದ್ದೀರಿ. ಮುಖ್ಯ ಎಂಜಿನಿಯರ್.....

ಶ್ರೀ ಎಸ್.ಎಂ. ಕೃಷ್ಣ:– ಉತ್ತರಕ್ಕೆ ಒಂದು ವಾರ ಕಾಲಾವಕಾಶ ಕೇಳಿದ್ದೇನೆ. ಇದನ್ನು ಇಷ್ಟೊಂದು ದೊಡ್ಡ ಚರ್ಚಾಸ್ಪದವಾದಂಥ ವಿಚಾರವನ್ನಾಗಿ ಮಾಡಬೇಕಾದ ಅಗತ್ಯತೆ ಇಲ್ಲ.

ಅಧ್ಯಕ್ಷರು:– ಈಗ ಮುಂದಿನ ಪ್ರಶ್ನೆ.

ಶ್ರೀ ಬಿ.ಹೆಚ್. ಬನ್ನೀಕೋಡ್:– ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಲು ತಾವು ಪ್ರಯತ್ನ ಪಡಬೇಕು. ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ:– ಅದಕ್ಕೆ ಮುಂದಿನ ವಾರ ಉತ್ತರ ಕೊಡುತ್ತೇನೆ.